SL. No. : NNN

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PF**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 95-K** **Code No. : 95-K**

# ವಿಷಯ : ಸಮಾಜಶಾಸ್ತ್ರ

## Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ / Private Fresh)**

ದಿನಾಂಕ : 03. 04. 2017 ] [ Date : 03. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ಪರಿವರ್ತನೆಗೆ ಕಾರಣ

   (A) ರಾಜಕೀಯ ಬದಲಾವಣೆ

   (B) ಸಾಮಾಜಿಕ ಬದಲಾವಣೆ

   (C) ಆರ್ಥಿಕ ಬದಲಾವಣೆ

   (D) ತಾಂತ್ರಿಕ ಬದಲಾವಣೆ

2. ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗಲು ಕಾರಣ

   (A) ಮನೆಗಳನ್ನು ಅರಸಿ

   (B) ವಾಸವನ್ನು ಅರಸಿ

   (C) ಕೆಲಸವನ್ನು ಅರಸಿ

   (D) ನೀರನ್ನು ಅರಸಿ

3. ಬೌದ್ಧ ಧರ್ಮದ ಸ್ಥಾಪಕ

   (A) ಮಹಾವೀರ

   (B) ಗೌತಮ ಬುದ್ಧ

   (C) ತೀರ್ಥಂಕರ

   (D) ಅಶ್ವಘೋಷ

4. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸಕದ ಲೇಖಕ

   (A) ಜಿ.ಎಸ್. ಗುರ್ರೆ

   (B) ಗಾಂಧೀಜಿ

   (C) ನೆಹರೂ

   (D) ದಯಾನಂದ ಸರಸ್ವತಿ

5. ಹಿಂದೂ ಪುನರ್ ವಿವಾಹ ಕಾಯ್ದೆ ಜಾರಿಗೆ ಬಂದ ವರ್ಷ

(A) 1856

(B) 1865

(C) 1986

(D) 1956

6. 'ವೇದಗಳಿಗೆ ಹಿಂದಿರುಗಿ' ಎಂಬ ಕೂಗನ್ನು ಕೊಟ್ಟವರು

(A) ದಯಾನಂದ ಸರಸ್ವತಿ

(B) ರಾಜಾ ರಾಮ್‌ಮೋಹನ್ ರಾಯ್

(C) ಜ್ಯೋತಿಭಾ ಫುಲೆ

(D) ಬಾಲಗಂಗಾಧರ್ ತಿಲಕ್

7. ಚಂಪಾರಣ್ಯ ಸತ್ಯಾಗ್ರಹ ನಾಯಕತ್ವ ವಹಿಸಿದ್ದವರು

(A) ಸರ್ದಾರ್ ವಲ್ಲಭಭಾಯಿ ಪಟೇಲ್

(B) ಮಹಾತ್ಮ ಗಾಂಧೀ

(C) ಜವಾಹರ್‌ಲಾಲ್ ನೆಹರೂ

(D) ಲಾಲ್‌ಬಹಾದೂರ್ ಶಾಸ್ತ್ರಿ

8. ಎಸ್.ಎನ್.ಡಿ.ಟಿ. ವಿಶ್ವವಿದ್ಯಾನಿಲಯವನ್ನು ಪುಣೆಯಲ್ಲಿ ಸ್ಥಾಪಿಸಿದವರು

(A) ಮಹರ್ಷಿ ಕರ್ವೆ

(B) ಬದ್ರುದ್ದೀನ್ ತ್ಯಾಯಬ್ಜಿ

(C) ದಯಾನಂದ ಸರಸ್ವತಿ

(D) ಸರ್ ಸಯದ್ ಅಹಮದ್ ಖಾನ್

9. ಒಂದು ಪ್ರದೇಶದ ಮೂಲ ವಾಸಸ್ಥರು

(A) ಆರ್ಯರು

(B) ಗಿರಿಜನರು

(C) ವಲಸಿಗರು

(D) ಆದಿವಾಸಿಗಳು

10. 'ಸಿಲಿಕಾನ್ ಸಿಟಿ' ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ನಗರ

(A) ಮೈಸೂರು

(B) ಬೆಂಗಳೂರು

(C) ಶಿವಮೊಗ್ಗ

(D) ಧಾರವಾಡ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಕೈಗಾರಿಕೀಕರಣ ಎಂದರೇನು ?

12. ಸಾಮಾಜಿಕ ಬದಲಾವಣೆ ಎಂದರೇನು ?

13. ಪ್ರಾದೇಶಿಕ ಅಸಮತೋಲನ ಎಂದರೇನು ?

14. 'ಕ್ಯಾಸ್ಟ್' ಎಂಬ ಪದದ ಮೂಲವನ್ನು ತಿಳಿಸಿ.

15. ಕ್ರಾಂತಿಕಾರಿ ಚಳುವಳಿಯ ಧ್ಯೇಯವೇನು ?

16. ಬರ್ದೋಲಿ ಸತ್ಯಾಗ್ರಹದ ನಾಯಕ ಯಾರು ?

17. ಭಾರತದ ಮೊದಲ ಮಹಿಳಾ ಪ್ರಧಾನ ಮಂತ್ರಿ ಯಾರು ?

18. ಸತಿ ಸಹಗಮನ ಪದ್ಧತಿ ಎಂದರೇನು ?

19. ಆದಿವಾಸಿಗಳನ್ನು ಗಾಂಧೀಜಿ ಏನೆಂದು ಕರೆದರು ?

20. ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಯಾರು ಹೊಂದಿದ್ದಾರೆ ?

21. ಸಮೂಹ ಮಾಧ್ಯಮ ಎಂದರೇನು ?

22. ವಯಸ್ಕರ ಶಿಕ್ಷಣ ಎಂದರೇನು ?

23. ಭಾರತ ರಾಷ್ಟ್ರೀಯ ಸೈನ್ಯದ ಮಹಿಳಾ ಘಟಕದ ಮುಖ್ಯಸ್ಥರು ಯಾರಾಗಿದ್ದರು ?

24. ಖೇಡಾ ಸತ್ಯಾಗ್ರಹದ ನಾಯಕರು ಯಾರು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಪ್ರಮುಖ ಸಾಧನಗಳಾವುವು ?

26. ನಿಯೋಜಿತ ಮತ್ತು ಅನಿಯೋಜಿತ ಬದಲಾವಣೆಗಿರುವ ವ್ಯತ್ಯಾಸಗಳೇನು ?

27. ಪ್ರಾದೇಶಿಕ ಅಸಮತೋಲನ ದೇಶದ ಪ್ರಗತಿಗೆ ತೊಡಕಾಗಿದೆ. ಹೇಗೆ ?

28. ಸಾಮಾಜಿಕ ಬದಲಾವಣೆ ಮಂದಗತಿಯಲ್ಲಿ ಸಾಗಲು ಅನಕ್ಷರತೆಯೇ ಕಾರಣ. ವಿವರಿಸಿ.

29. ಜಾತಿ ಪದದ ಉಗಮ ಮತ್ತು ಅರ್ಥವನ್ನು ವಿವರಿಸಿ.

30. ಪಕ್ಕಾ ಮತ್ತು ಕಚ್ಚಾ ಆಹಾರಕ್ಕಿರುವ ವ್ಯತ್ಯಾಸವೇನು ?

31. ಕಬೀರ್ ಪಂಥದ ಬಗ್ಗೆ ಕಿರು ಟಿಪ್ಪಣಿ ಬರೆಯಿರಿ.

32. ದಂಗೆ ಸತ್ಯಾಗ್ರಹಕ್ಕಿಂತ ಭಿನ್ನವಾದುದು ಹೇಗೆ ?

33. ವಿವಾಹಕ್ಕೆ ಸಂಬಂಧಪಟ್ಟ ಕಾನೂನುಗಳು ಯಾವುವು ?

34. ಬ್ರಿಟಿಷರ ಆಡಳಿತ ಸಮಯದಲ್ಲಿ ಮಹತ್ವದ ಪಾತ್ರವಹಿಸಿದ ಮಹಿಳಾ ಸಂಘಟನೆಗಳು ಯಾವುವು ?

35. ಭಾರತದ ಬುಡಕಟ್ಟು ಜನಾಂಗಗಳಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಬದಲಾವಣೆಯನ್ನು ವಿವರಿಸಿ.

36. ಭಾರತದ ಬುಡಕಟ್ಟು ಜನಾಂಗಗಳ ಅವನತಿಗೆ ಕಾರಣಗಳೇನು ?

37. ಸಮೂಹ ಮಾಧ್ಯಮವಾಗಿ ರೇಡಿಯೋ ವಹಿಸಿರುವ ಪಾತ್ರವನ್ನು ತಿಳಿಸಿ.

38. ದೂರದರ್ಶನದಿಂದ ಸಮಾಜದ ಮೇಲಾಗುವ ಉತ್ತಮ ಪರಿಣಾಮಗಳೇನು ?

39. ಹಂಟರ್‌ರವರ ಶಿಕ್ಷಣ ಆಯೋಗದಲ್ಲಿ ಮಹಿಳಾ ಶಿಕ್ಷಣಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ತಿಳಿಸಿ.

40. ಶಿಕ್ಷಣವು ಸಮಾಜದ ಚಲನೆಗೆ ಹೇಗೆ ಸಹಾಯಕ ?

41. ಶಿಕ್ಷಣವು ನಗರೀಕರಣವನ್ನು ಪ್ರೋತ್ಸಾಹಿಸುತ್ತದೆ ಹೇಗೆ ?

42. ಜಾತಿಯು ಊಟೋಪಚಾರದ ಮೇಲೆಯೂ ನಿರ್ಬಂಧ ವಿಧಿಸುತ್ತದೆ. ಹೇಗೆ ?

43. ನಗರ ಪ್ರದೇಶಗಳಲ್ಲಿ ಜಾತಿಯ ಪ್ರಭಾವ ಕುಗ್ಗುತ್ತಿದೆ. ಏಕೆ ?

44. ಪುನರಾವರ್ತಿತ ಸಾಮಾಜಿಕ ಬದಲಾವಣೆಗೆ ಎರಡು ಉದಾಹರಣೆ ನೀಡಿ.

45. ಕಬೀರ್ ಎರಡೂ ಧರ್ಮದವರ ಕೋಪಕ್ಕೆ ತುತ್ತಾದರು. ಏಕೆ ?

46. ಮಹಿಳೆಯರ ಸಮಾನತೆಗಾಗಿ ಹೋರಾಡಿದ ಸಮಾಜ ಸುಧಾರಕರು ಯಾರು ?

47. ಸಮೂಹ ಮಾಧ್ಯಮಗಳು ಭಾರತೀಯರ ವಿವಾಹ ಪದ್ಧತಿಯಲ್ಲಿ ಬದಲಾವಣೆ ಉಂಟು ಮಾಡಿದೆ. ಹೇಗೆ ?

48. ಬುಡಕಟ್ಟು ಜನಾಂಗವನ್ನು ಸಮಾಜಶಾಸ್ತ್ರಜ್ಞರು ಹೇಗೆ ವ್ಯಾಖ್ಯಾನಿಸಿದ್ದಾರೆ ?

49. 1992 ರಿಂದ ಭಾರತದಲ್ಲಿ ಆರ್ಥಿಕ ಅಸಮತೋಲನ ಹೆಚ್ಚಾಗಿದೆ. ಏಕೆ ?

IV. **ಈ ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವನ್ನು ತಿಳಿಸಿ.

***ಅಥವಾ***

ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ವಿವರಿಸಿ.

51. "ಬಡವರು ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ." ಏಕೆ ?

***ಅಥವಾ***

ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಹಿಂದುಳಿದಿದೆ. ಏಕೆ ?

52. ಸಾಮಾಜಿಕ ಬದಲಾವಣೆಗೆ ಜಾತಿ ಅಡ್ಡಿಯಾಗಿದೆ ಎಂಬುದನ್ನು ವಿವರಿಸಿ.

***ಅಥವಾ***

ಆಧುನಿಕ ಕಾಲದಲ್ಲಿನ ಜಾತಿ ವ್ಯವಸ್ಥೆ ಬಗ್ಗೆ ವಿವರಿಸಿ.

53. ಭಾರತದಲ್ಲಿ ಪ್ರತಿಭಟನಾತ್ಮಕ ಚಳುವಳಿಗಳ ಸ್ವರೂಪವನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಸುಧಾರಣಾ ಚಳುವಳಿಗಳ ಇತಿಹಾಸವನ್ನು ವಿವರಿಸಿ.

54. ಮಹಿಳಾ ಸಬಲೀಕರಣದ ಪ್ರಾಮುಖ್ಯತೆಯನ್ನು ತಿಳಿಸಿ.

**ಅಥವಾ**

ಮಹಿಳಾ ಸಬಲೀಕರಣದ ಅಂಶಗಳನ್ನು ಪಟ್ಟಿಮಾಡಿ.

55. ಬುಡಕಟ್ಟು ಜನರ ಅಭಿವೃದ್ಧಿಗೆ ನಮ್ಮ ಸಂವಿಧಾನದ ಸವಲತ್ತುಗಳು ಯಾವುವು ?

**ಅಥವಾ**

ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

56. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?

57. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮಪಡಿಸಲು ಮಾಡಿರುವ ಸಾಮಾಜಿಕ ಶಾಸನಗಳಾವುವು ?